UASB LIBRARY
Newspaper Clippings



Pg .1 Thursday 20-01-2021 Jai Kisan

Centre may introduce DBT system for fertiliser subsidies this Budget

ANURADHA SHUKLA @ New Delhi

STRUGGLING with a very high fertilizer subsidy, the Centre is considering implementing a direct benefit transfer (DBT) scheme for the sector.

"The Direct Benefit Transfer route is working well where it has been implemented. It has helped the government save money by plugging loopholes and ensured that money reaches genuine beneficiaries only. It was of great help during the Covid-19 period too, which is why the Centre is considering this for fertilizer subsidies as well. The proposal is under consideration and can be announced in the upcoming budget," a senior finance ministry official said.

Under the proposed scheme, farmers will be directly transferred the subsidy for fertilizer purchases through their bank accounts as it is done in the case of LPG subsidies. The government will use the database of the PM Kisan Scheme to transfer the money.

Under current practice, the government transfers subsidies to fertiliser companies while farmers purchase the product at a lower rate. However, subsidies are transferred only after internal verification against bills.

While the government complains of dubious bills, fertilizer companies complain of delayed payments which affects their liquidity.

In the Union Budget for 2020-21, the central government had allocated ₹71,309 crore towards fertiliser subsidies and, on top of that, had announced an additional ₹65,000 crore to clear the backlog of payments for fertilizer companies as part of the Aatmanirbhar Bharat relief package.

According to ratings agency ICRA, the subsidy requirement for FY22 is expected to be in the range of ₹85,000-90,000 crore. The official noted that the Commission for Agricultural Costs and Prices (CACP) has strongly recommended switching over to direct cash subsidies to farmers for fertilizer.

However, experts also note that it is as yet uncertain whether the government will go ahead with this proposal this year considering the ongoing farmers agitation.



₹85,000-90,000 cr
Estimated fertiliser subsidy required for financial year 2021-22, according to ICRA

The DBT route is working well where implemented. It has helped the government save money by plugging loopholes and ensured that money reaches genuine beneficiaries only. — Senior FinMin Official

20-01-2021 Ind Exp Pg 13

For more information visit
University Library Website
Web - uasbagrilibindia.org
E-mail- librarian@uasbangalore.edu.in

Farmer suicides not due to govt. policies, says Minister

B.C. Patil attributes suicides to 'weakness of mind'

SPECIAL CORRESPONDENT
MYSURU

Minister for Agriculture B.C. Patil sought to delink farmers suicide from government policies claiming the two were unrelated, while attributing suicides to "weakness of mind".

Speaking to media persons here on Tuesday, Mr. Patil said suicides were not confined to the farming community and officials, industrialists and others too have ended lives when in distraught. It is during this spell of momentary weakness that suicides are committed and the government was conceiving policies and programmes to address this issue, said Mr. Patil.

The Minister said the 'One District One Product' (ODOP) project was a step in that direction through value addition to agricultural and horticultural produce under the Pradhan Mantri Formalisation of Micro Food Processing Enterprises Scheme.

"Merely visiting the bereaved family members of farmers and offering sympathies will not help the community. But such programmes will help shore up their income and prevent suicides," he said.


Minister for Agriculture B.C. Patil at a press conference in Mysuru on Tuesday. • M.A. SRIRAM

ODOP implementation

Karnataka was on the forefront in implementing ODOP for food processing and value addition, according to Mr. Patil, who refuted suggestions that it could promote mono culture. The programme identified a suitable crop for which there was scope for value addition through processing locally and does not mean that all farmers will be encouraged to shift to one crop. The agricultural policy gives thrust to integrated farming promoting crop diversity, the Minister said.

He said the government had reached an understanding with the Central Food Technological Research Institute in Mysuru to train nearly 500 farmers from across the State on various aspects of technology transfer for value addition besides marketing. The exercise will go on till March 31, he said.

On the ongoing farmers protest against the farm laws, Mr. Patil said it was devoid of logic as the laws were favourable to the farmers and had opened up the market under 'one nation one market' concept.

The amendments to the various farm laws introduced by the government would benefit the farmers and free them from the clutches of middlemen, he added.

20-01-2021 Hindu Pg 04

ಇಳುವರಿ ಕುಸಿತ

ಉತ್ತರ ಕರ್ನಾಟಕ ಭಾಗದಲ್ಲಿ ಜೋಳದ ರೊಟ್ಟಿ ಪ್ರಸಿದ್ಧಿಯಾಗಿದೆ. ಅನ್ನಕ್ಕಿಂತ ರೊಟ್ಟಿ ಪ್ರಿಯರು ಹೆಚ್ಚಾಗಿದ್ದಾರೆ. ರೊಟ್ಟಿ ಬಲು ಗಟ್ಟಿ ಹೀಗಾಗಿಯೇ ರೊಟ್ಟಿ ತಿಂದವರ ರಟ್ಟಿ ಗಟ್ಟಿ ಎಂದು ಹೇಳಲಾಗುತ್ತಿದೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ಸತತ ಬರದ ಛಾಯೆ ಮೂಡಿರುವ ಪರಿಣಾಮ ಬಿಳ ಜೋಳದ ಇಳುವರಿ ಕಡಿಮೆಯಾಗಿದೆ. ಅನಾರೋಗ್ಯಕ್ಕೊಳಗಾದವರು, ಕೂಲಿ ಕಾರ್ಮಿಕರು, ಸಾಮಾನ್ಯ ವರ್ಗದ ಜನರು ಜೋಳದ ಮೇಲೆ ಅವಲಂಬಿತರಾಗಿದ್ದು, ಪಟ್ಟಣ, ನಗರ ಪ್ರದೇಶದ ಕಿರಾಣಿ ಅಂಗಡಿಗಳಲ್ಲಿ ಕೆ.ಜಿ. ಲೆಕ್ಕಾಚಾರದಲ್ಲಿ ಜೋಳ ಮಾರಾಟವಾಗುತ್ತಿರುವುದು ಬಡವರಿಗೆ ತೊಂದರೆಯಾಗುತ್ತಿದೆ.

ಕಳೆದ ಸಾರಿಗಿಂತ ಈ ಸಾರಿ ಬಿಳಿಜೋಳ ಬಿತ್ತನೆ ಕಡಿಮೆಯಾಗಿದೆ. ಏಕೆಂದರೆ ಹಸ್ತಾ, ಚಿತ್ತಾ ಮಳೆಗಳು ಎಡೆಬಿಡದೆ ಸುರಿದ ಪರಿಣಾಮ ಭೂಮಿ ಬಿತ್ತಲು ಹದಕ್ಕೆ ಬರಲೇ ಇಲ್ಲ. ಇದರಿಂದ ನೆಲ ಸ್ವಚ್ಛಗೊಳಿಸಿ ಭೂಮಿ ಬಿತ್ತನೆ ಮಾಡಲು ಸಾಧ್ಯವಾಗಲಿಲ್ಲ. ವಿಜಯಪುರ ಜಿಲ್ಲೆಯಲ್ಲಿ 2019–20ರಲ್ಲಿ 1.25 ಲಕ್ಷ ಹೆಕ್ಟೇರ ಪ್ರದೇಶದಲ್ಲಿ ಬಿತ್ತಲಾಗಿತ್ತು. ಈ ಬಾರಿಯೂ ಅಷ್ಟೇ ಪ್ರಮಾಣದಲ್ಲಿ ಬಿತ್ತನೆಯಾಗಿದೆ. ಆದರೆ ಬಾಗಲಕೋಟಿ ಜಿಲ್ಲೆಯಲ್ಲಿ 2019–20ರಲ್ಲಿ 91054 ಹೆಕ್ಟೇರ ಪ್ರದೇಶದಲ್ಲಿ ಬಿತ್ತನೆಯಾಗಿದ್ದರೆ, 2020–21ರಲ್ಲಿ 75400 ಹೆಕ್ಟೇರ್ ಮಾತ್ರ ಬಿತ್ತನೆ ಮಾಡಲು ಸಾಧ್ಯವಾಗಿದೆ.



20-01-2021 Sk Pg 05

ದುರ್ಬಲ ಮನಸ್ಸಿನಿಂದ ರೈತರ ಆತ್ಮಹತ್ಯೆ: ಬಿ.ಸಿ.ಪಾಟೀಲ್

ರೈತ ಆತ್ಮಹತ್ಯೆಗೆ ಸರ್ಕಾರದ ನೀತಿಗಳು ಕಾರಣ ಅಲ್ಲ

ಮೈಸೂರು: ರೈತರು ದುರ್ಬಲ ಮನಸ್ಸಿನಿಂದ (ವೀಕ್ನೆಸ್ ಆಫ್ ಮೈಂಡ್) ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದರೆ, ರೈತರ ಆತ್ಮಹತ್ಯೆಗೆ ಸರ್ಕಾರದ ನೀತಿಗಳು ಕಾರಣವಲ್ಲ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು. ನಗರದಲ್ಲಿ ಮಂಗಳವಾರ ಒಂದು ಜಿಲ್ಲೆ ಒಂದು ಬೆಳೆ ತರಬೇತಿ ಕಾರ್ಯಕ್ರಮ ಮತ್ತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಗಳು ತನ್ನ ಕೆಲಸ ಮಾಡುತ್ತಿವೆ. ಹಳ್ಳಿಯಲ್ಲಿರುವ ಬಹುತೇಕರು ರೈತರೇ ಆಗಿರುತ್ತಾರೆ. ಹಾಗಂತ ಹಳ್ಳಿಗಳಲ್ಲಿ ಆಗುವ ಎಲ್ಲ ಸಾವುಗಳು ರೈತರ ಆತ್ಮಹತ್ಯೆ ಅಂದುಕೊಳ್ಳೋಕೆ ಆಗುತ್ತಾ? ಎಂದು ಪ್ರಶ್ನಿಸಿದರು. ಸಮಸ್ಯೆಗೆ ಕಾರಣ ಹುಡುಕುವುದೇ ತಜ್ಞರ ಸಮಿತಿಗಳ ಕೆಲಸ. ಅವರು ನೀಡುವ ವರದಿಯಂತೆಯೇ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ. ರೈತರು ಆತ್ಮಹತ್ಯೆ ಮಾಡಿಕೊಂಡ ತಕ್ಷಣ ಅವರ ಮನೆಗೆ ಹೋಗಿ ಹಾರ ಹಾಕಿದೆ, ಸಾಂತ್ವನ ಹೇಳಿದೆ ಆತ್ಮಹತ್ಯೆ ನಿಲ್ಲೋದಿಲ್ಲ. ಅದಕ್ಕೆ ಪರ್ಯಾಯವಾಗಿ ಕಾರ್ಯಕ್ರಮ ರೂಪಿಸಬೇಕು. ಆ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಆಲ್ಕೂದೆ, ರೈತ ಬೆಳೆಗೆ ತಾನೇ ಬೆಲೆ ನಿಗದಿಪಡಿಸಬೇಕು. ತಾವೇ ಬ್ಯಾಂಡ್ ಮಾಡಿದಲ್ಲಿ ಆದಾಯ ದ್ವಿಗುಣಗೊಳ್ಳಲಿದೆ ಎಂದರು.



ಠಾಕ್ರೆ ಮಾನಸಿಕ ಆಸ್ಪತ್ರೆಗಾಗಿದ್ರೆ ಆಸ್ಪತ್ರೆ ಸೇರಲಿ: ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮೆಂಟಲ್ ಆಗಿರಬೇಕು. ಮಾನಸಿಕವಾಗಿ ಸ್ವಲ್ಪ ವ್ಯತ್ಯಾಸ ಆಗಿದ್ರೆ, ಹೋಗಿ ಆಸ್ಪತ್ರೆಗೆ ಸೇರಿಕೊಳ್ಳಲಿ ಎಂದು ಸಚಿವ ಪಾಟೀಲ್ ಹೇಳಿದ್ದಾರೆ.

20-01-2021 kp Pg 09

"Your attitude determines your direction"

UASB LIBRARY
Newspaper Clippings
Pg .2 Thursday 20-01-2021 Jai Kisan



ಸಿರಿಗೆರೆ ಸರ್ಕಲ್‌ನಲ್ಲಿ ರೈತಸ್ನೇಹಿ ಮಾರುಕಟ್ಟೆ: ನೇರ ಖರೀದಿ, ಹೊರ ರಾಜ್ಯಗಳಿಗೂ ಅವರೆ ರವಾನೆ

ಅವರೆ ಸುಗ್ಗಿಯಲ್ಲಿ ರೈತರ ಸಂಭ್ರಮ

ಎಂ.ಜೆ. ತಿಪ್ಪೇಸ್ವಾಮಿ

ಚಿತ್ರದುರ್ಗ: ಸುಗ್ಗಿ ಕಾಲದ ಅವರೆಕಾಯಿ ಸೊಗಡಿನ ವಾಸನೆ ಈಗ ಎಲ್ಲೆಡೆ ಹರಡಿದೆ. ವರ್ಷದ ಎಲ್ಲಾ ಋತುದಲ್ಲೂ ಬೆಳೆಯುವ ಅವರೆಕಾಯಿಗಿಂತ ಅವರೆ ಸುಗ್ಗಿಯ ಸಮಯ ಚಳಿಗಾಲದಲ್ಲಿ ಬೆಳೆಯುವ ನಾಟಿ ಅವರೆಕಾಯಿ ಸೊಗಡಿನ ಘಮಲೇ ಬೇರೆ.

ಈಗ ವರ್ಷವಿಡೀ ಬೆಳೆಯುವ ತಳಗಳಿದ್ದರೂ ಚಳಿಗಾಲದಲ್ಲಿ ಆರಂಭವಾಗುವ ಅವರೆಕಾಯಿಗೆ ಹೆಚ್ಚಿನ ಬೇಡಿಕೆ. ಮಾರುಕಟ್ಟೆ ಹಾಗೂ ಮನೆಗಳ ಮುಂದೆ ಅವರೆಕಾಯಿ ತಂದು ವ್ಯಾಪಾರ ಮಾಡುವ ಜನರೇ ಹೆಚ್ಚು.

ದಿಗಂತ ವಿಶೇಷ

ದೊಡ್ಡ ಪ್ರಮಾಣದ ಮಾರುಕಟ್ಟೆ: ಚಿತ್ರದುರ್ಗ ತಾಲೂಕಿನ ಸಿರಿಗೆರೆ ಸರ್ಕಲ್ ಬಳಿ ಅವರೆಕಾಯಿ ಸುಗ್ಗಿ ಸಂದರ್ಭದಲ್ಲಿ ಪ್ರತಿನಿತ್ಯ ದೊಡ್ಡ ಪ್ರಮಾಣದ ಮಾರುಕಟ್ಟೆ ನಡೆಯುತ್ತದೆ. ಜಿಲ್ಲೆಯಲ್ಲಿ ತೊಗರಿ ಬಿಳೆ ಬಿಟ್ಟರೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವ ದ್ವಿದಳ ಧಾನ್ಯ ಅವರೆ. ಇದರ ಸೊಗಡಿನ ಘಮಲು ಕೇವಲ ಚಿತ್ರದುರ್ಗ ಜಿಲ್ಲೆಯಷ್ಟೇ ಅಲ್ಲ ಇಲ್ಲಿಂದ ಬೇರೆ ಜಿಲ್ಲೆ, ಹೊರ ರಾಜ್ಯಗಳಿಗೂ ಅವರೆಕಾಯಿ ರವಾನೆಯಾಗುತ್ತಿದೆ. ಆ ಮೂಲಕ ಅಲ್ಲೂ ಅವರೆ ಘಮಲು ಹರಡುತ್ತಿದೆ. ಜಿಲ್ಲೆಯ ಚಿತ್ರದುರ್ಗ, ಹೊಳಲ್ಕೆರೆ ಮತ್ತು ಹೊಸದುರ್ಗ ಭಾಗದಲ್ಲೂ ಅವರೆ ಬೆಳೆಯಲಾಗುತ್ತದೆ.

ರೈತರಿಂದಲೇ ಮಾರಾಟ: ಭರಮಸಾಗರ ಹೋಬಳಿ ಹಾಗೂ ಸುತ್ತಮುತ್ತಲಿನ ನೂರಾರು ಹಳ್ಳಿಗಳ ರೈತರು ಅವರೆ ಬೆಳೆಯುವರು. ತಾವು ಬೆಳೆದ ಅವರೆಕಾಯಿ ತಂದು ಸಗಟುದಾರರಿಗೆ ಮಾರಾಟ ಮಾಡುತ್ತಾರೆ. ಅಲ್ಲಿಂದ ಬೆಂಗಳೂರು, ರಾಮನಗರ, ದೊಡ್ಡಬಳ್ಳಾಪುರ, ಮಹಾರಾಷ್ಟ್ರ ಸಾಂಗ್ಲಿ, ಕೊಲ್ಲಾಪುರ, ಕರಾಡು, ಪೂನಾ, ಮೀರಜ್ ಸೇರಿದಂತೆ ಮತ್ತಿತರ ಕಡೆಗಳಿಗೆ ರವಾನೆಯಾಗುತ್ತದೆ. ಈ ಭಾಗದ ರೈತರಿಂದ ಅವರೆಕಾಯಿ ಖರೀದಿಸಿದ ವ್ಯಾಪಾರಿಗಳು ಹೊರ ಜಿಲ್ಲೆ, ರಾಜ್ಯಗಳಿಗೆ ಕಳುಹಿಸುವರು. ಇಲ್ಲಿನ ಅವರೆಕಾಯಿಗೆ ಹೊರ ಜಿಲ್ಲೆ, ರಾಜ್ಯಗಳಲ್ಲಿ ಹೆಚ್ಚಿನ ಬೇಡಿಕೆ ಇದೆ.



ಅಧಿಕ ಇಳುವರಿ

ಜಿಲ್ಲೆಯಲ್ಲಿ 2140 ಹೆಕ್ಟೇರ್ ಪ್ರದೇಶದಲ್ಲಿ ಅವರೆ ಬಿತ್ತನೆ ಗುರಿಯಿತ್ತು. ಈ ವರ್ಷ 1133 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಚಿತ್ರದುರ್ಗ ತಾಲೂಕು ಒಂದರಲ್ಲೇ ಸುಮಾರು 809 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ.

ರಫ್ತು

ಬೆಂಗಳೂರು, ರಾಮನಗರ, ದೊಡ್ಡಬಳ್ಳಾಪುರ, ಮಹಾರಾಷ್ಟ್ರ ಸಾಂಗ್ಲಿ, ಕೊಲ್ಲಾಪುರ, ಕರಾಡು, ಪೂನಾ, ಮೀರಜ್ ಸೇರಿದಂತೆ ಹೊರ ರಾಜ್ಯಕ್ಕೂ ಇಲ್ಲಿನ ಅವರೆ ರಫ್ತಾಗುತ್ತದೆ..

ಮಧ್ಯವರ್ತಿಗಳ ಹಾವಳಿ ಇಲ್ಲ

ಸುಮಾರು ಆರೇಳು ತಿಂಗಳ ಕಾಲ ಪ್ರತಿನಿತ್ಯ ದೊಡ್ಡ ಮಟ್ಟದ ವ್ಯಾಪಾರ ವಹಿವಾಟು ನಡೆಯುತ್ತದೆ. ಪ್ರತಿದಿನ 800 ರಿಂದ ಸಾವಿರ ಚೀಲ ಅವರೆಕಾಯಿ ಇಲ್ಲಿಂದ ಬೇರೆ ಬೇರೆ ಕಡೆಗೆ ರವಾನೆ ಯಾಗುತ್ತದೆ. ಕಳೆದ ಅನೇಕ ವರ್ಷದಿಂದ ಇಲ್ಲಿ ಅವರೆ ಮಾರಾಟ ಮಾಡುತ್ತಿದ್ದೇವೆ. ಆಯಾ ದಿನದ ದರಕ್ಕೆ ಅನುಗುಣವಾಗಿ ವ್ಯಾಪಾರ ನಡೆಯುತ್ತದೆ. ಒಂದೊಂದು ದಿನ ಒಂದೊಂದು ದರ ಇರುತ್ತದೆ. ಒಂದು ಕೆಜಿಗೆ 18, 20, 30 ರೂ. ದರ ಸಿಗುತ್ತದೆ. ಯಾವುದೇ ಕಮಿಷನ್, ಮಧ್ಯವರ್ತಿಗಳ ಹಾವಳಿ ಇಲ್ಲ ಈ ಮಾರುಕಟ್ಟೆಯಿಂದ ನಮಗೆ ಹೆಚ್ಚು ಅನುಕೂಲವಾಗಿದೆ ಎನ್ನುತ್ತಾರೆ ರೈತರು.



20-01-2021 Hd Pg 03

45 ಲಕ್ಷ ಟನ್ ಭತ್ತ ಖರೀದಿಗೆ ಮನವಿ

ಬೆಂಗಳೂರು: ರಾಜ್ಯದ ರೈತರು ಬೆಳೆಯುವ 45 ಲಕ್ಷ ಟನ್‌ಗಳಷ್ಟು ಭತ್ತವನ್ನು ಖರೀದಿ ಮಾಡಲು ರಾಜ್ಯಕ್ಕೆ ಅನುಮತಿ ನೀಡಬೇಕು ಎಂದು ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಗೋಪಾಲಯ್ಯ ಈ ವಿಷಯ ತಿಳಿಸಿದರು. ಸದ್ಯಕ್ಕೆ ರಾಜ್ಯದ ರೈತರಿಂದ ಹನ್ನೆರಡು ಲಕ್ಷ ಟನ್‌ಗಳಷ್ಟು ಭತ್ತ ಖರೀದಿಸಲು ನಮಗೆ ಅವಕಾಶವಿದೆ. ಆದರೆ ಕರೋನೋತ್ತರ ಕಾಲಘಟ್ಟದಲ್ಲಿ ರೈತರಿಗೆ, ಸಾಗಣೆದಾರರಿಗೆ ಮತ್ತು ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸುವ ದೃಷ್ಟಿಯಿಂದ ನಮ್ಮ ಭತ್ತ ನಮಗೆ ಇರಲಿ ಎಂದು ಕೇಂದ್ರಕ್ಕೆ ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದರು.

> ಕರೋನಾ ವಿಕೋಪಕ್ಕೆ ಹೋದ ಸನ್ನಿವೇಶದಲ್ಲಿ ಆಹಾರ ಇಲಾಖೆ ಅತ್ಯುತ್ತಮವಾಗಿ ಕೆಲಸ ಮಾಡಿದೆ । ಕೇಂದ್ರದ ನೆರವಿನೊಂದಿಗೆ ನಮ್ಮ ನೆರವು

ನೂರಾರು ಕೋಟಿ ರುಗಳಷ್ಟು ಸಾಗಣೆ ವೆಚ್ಚ: ರಾಜ್ಯದಲ್ಲಿ ಪ್ರತಿವರ್ಷ 50 ಲಕ್ಷ ಟನ್ ಅಕ್ಕಿಯನ್ನು ಜನ ಬಳಕೆ ಮಾಡುತ್ತಿದ್ದು, ಈ ಪೈಕಿ ದೊಡ್ಡ ಪ್ರಮಾಣದ ಭತ್ತವನ್ನು ಹೊರರಾಜ್ಯಗಳಿಂದ ಪಡೆಯಲಾಗುತ್ತಿದೆ. ಗುಜರಾತ್, ಉತ್ತರ ಪ್ರದೇಶ ಸೇರಿದಂತೆ ದೇಶದ ವಿವಿಧ ರಾಜ್ಯಗಳಿಂದ ನಮಗೆ ಭತ್ತ ಸರಬರಾಜಾಗುತ್ತಿದ್ದು, ಹೀಗೆ ಸರಬರಾಜಾಗುವ ಭತ್ತಕ್ಕೆ ಪ್ರತಿಯಾಗಿ ನೂರಾರು ಕೋಟಿ ರುಗಳಷ್ಟು ಸಾಗಣೆ ವೆಚ್ಚ ತಗಲುತ್ತಿದೆ.

ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ರೈತರು ಬೆಳೆಯುವ ಭತ್ತವನ್ನು ಬೆಂಬಲ ಬೆಲೆ ನೀಡಿ ಖರೀದಿಸಲು ನಮಗೆ ಅವಕಾಶವಾದರೆ ರೈತರಿಗೂ ಅನುಕೂಲವಾಗುತ್ತದೆ. ಸಾಗಣೆದಾರರಿಗೂ ಅನುಕೂಲವಾಗುತ್ತದೆ. ಅದೇ ರೀತಿ ಬೆಳೆದ ಭತ್ತವನ್ನು ರಾಜ್ಯ ಸರಕಾರವೇ ಖರೀದಿ ಮಾಡುತ್ತದೆ ಎಂಬುದು ಖಚಿತವಾದರೆ ಹೆಚ್ಚಿನ ಯುವಕರು ಕೃಷಿ ಕೆಲಸದಲ್ಲಿ ತೊಡಗಲು ಪ್ರೇರಣೆ ನೀಡಿದಂತಾಗುತ್ತದೆ ಎಂದು ವಿವರಿಸಿದರು.

ಆರ್ಥಿಕತೆಗೆ ಚೇತರಿಕೆ ನೀಡುವ ಅಗತ್ಯ: ಕರೋನಾದಿಂದಾಗಿ ರಾಜ್ಯ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದು, ಇಂತಹ ಸನ್ನಿವೇಶದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ, ಆ ಮೂಲಕ ಆರ್ಥಿಕತೆಗೆ ಚೇತರಿಕೆ ನೀಡುವ ಅಗತ್ಯವಿದೆ. ಈ ಬಾರಿಯ ಬಜೆಟ್‌ನಲ್ಲಿ ರಾಜ್ಯದ ಜನರಿಗೆ ಹೊಸ ಶಕ್ತಿ ತುಂಬುವ ಯೋಜನೆಗಳನ್ನು ನೀಡಬೇಕು ಎಂಬ ಯೋಚನೆ ಇದೆ. ಆದರೆ ಸರಕಾರದ ಆರ್ಥಿಕ ಪರಿಸ್ಥಿತಿಯ ಮೇಲೆ ಇದು ಜಾರಿಯಾಗುತ್ತದೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಮಂತ್ರಿಗಳು ಸದ್ಯದಲ್ಲೇ ಬಜೆಟ್ ಪೂರ್ವಭಾವಿ ಸಭೆಯನ್ನು ನಡೆಸಲಿದ್ದು, ಈ ಸಂದರ್ಭದಲ್ಲಿ ಆಹಾರ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಅವರಿಗೆ ಸಲ್ಲಿಸುತ್ತೇವೆ. ಈ ಪ್ರಸ್ತಾವದಲ್ಲಿ ನಮ್ಮ ಹೊಸ ಯೋಜನೆಗಳ ವಿವರ ಇರಲಿದೆ ಎಂದರು. ಕರೋನಾ ವಿಕೋಪಕ್ಕೆ ಹೋದ ಸನ್ನಿವೇಶದಲ್ಲಿ ಆಹಾರ ಇಲಾಖೆ ಅತ್ಯುತ್ತಮವಾಗಿ ಕೆಲಸ ಮಾಡಿದೆ ಎಂದು ಸಮರ್ಥಿಸಿಕೊಂಡ ಅವರು, ಕೇಂದ್ರದ ನೆರವಿನೊಂದಿಗೆ ಜನರ ನೆರವಿಗೆ ನಾವು ಬಂದಿದ್ದೇವೆ.

ಈಗಿನ ಆರ್ಥಿಕ ಬಿಕ್ಕಟ್ಟು ಇನ್ನೊಂದು ವರ್ಷದಲ್ಲಿ ನಿವಾರಣೆಯಾಗುವ ಲಕ್ಷಣಗಳಿವೆ ಎಂದು ಆಶಾಭಾವನೆ ವ್ಯಕ್ತಪಡಿಸಿದ ಅವರು, ಮುಂದಿನ ಬಜೆಟ್‌ನಲ್ಲಿ ನಾವು ಕೈಗೆದ್ದಲ್ಲವನ್ನೂ ಕೊಡುವುದು ಮುಖ್ಯಮಂತ್ರಿಗೆ ಕಷ್ಟವಾಗಬಹುದು. ಹೀಗಾಗಿ ಅವರು ನೀಡುವ ಸೂಚನೆಯನ್ನು ಅನುಸರಿಸಿ ಮುಂದಿನ ಹೆಜ್ಜೆ ಇಡುವುದಾಗಿ ಹೇಳಿದರು.

20-01-2021 Vsv Pg 05

ಬಾಲ ಇಲ್ಲದ ಜೀರಿಗೆಯೇ ಶ್ರೇಷ್ಠ



ಸಾಂಬಾರಿಗೆ ಮಸಾಲೆ ತಯಾರಿಯಲ್ಲಿ ಮೆಣಸಿಗೆ ಇರುವ ಪ್ರಾಮುಖ್ಯತೆ ಇತರ ಸಾಂಬಾರ ಪದಾರ್ಥಗಳಿಗೂ ಇವೆ. ಅದರಲ್ಲಿ ಜೀರಿಗೆಯೂ ಒಂದು. ಗುಣಮಟ್ಟದ ಜೀರಿಗೆಯನ್ನು ಅದರ ಬಾಲ ಇದೆಯೋ, ಇಲ್ಲವೋ ಎನ್ನುವುದರ ಮೇಲೆ ನಿರ್ಧರಿಸಬಹುದು.

ಪ್ರಮುಖ ಸಾಂಬಾರ ಪದಾರ್ಥವಾಗಿರುವ ಜೀರಿಗೆ, ಔಷಧೀಯ ಸಸ್ಯವಾಗಿಯೂ ಪ್ರಯೋಜನಕಾರಿ ಎನ್ನುವುದು ನಿಮಗೆ ತಿಳಿದಿರುವ ವಿಚಾರ. ರಾಜಸ್ಥಾನ್ ಹಾಗೂ ಗುಜರಾತ್‌ನಲ್ಲಿ ಜೀರಿಗೆ ಹಾಗೂ ಧನಿಯಾವನ್ನು ಅತೀ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲಾಗುತ್ತದೆ. ವಿಶ್ವದ ಶೇ.60ರಷ್ಟು ಭಾಗಕ್ಕೆ ಜೀರಿಗೆ ಪೂರೈಕೆ ಆಗುವುದು ಇಲ್ಲಿಂದಲೇ.

ಗುಜರಾತ್‌ನ ಊಂಜಾ ಮಾರುಕಟ್ಟೆ ಜೀರಿಗೆ ಮಾರಾಟದ ಪ್ರಮುಖ ಸ್ಥಳ. ಇಂದು ನಾವು ಸೇವಿಸುವ ಜೀರಿಗೆಯೂ ಅಲ್ಲಿಂದಲೇ ಪೂರೈಕೆ ಆಗುತ್ತದೆ. ಜೀರಿಗೆಯಲ್ಲೂ ಅನೇಕ ವಿಧಗಳಿವೆ. ಇದರಲ್ಲಿ ಜೀರಾ ಬೋಲ್ಡ್ ಎನ್ನುವುದು ಉತ್ತಮ ಜೀರಿಗೆ ಆಗಿದೆ. ರುಚಿ ಮತ್ತು ಪರಿಮಳದಲ್ಲಿ ಇದು ಪಕ್ಕಾ ಗುಣಮಟ್ಟ. ಜೀರಿಗೆಯ ಒಂದು ತುದಿಯಲ್ಲಿ ಬಾಲದಂತಹ ಸಣ್ಣ ಭಾಗ ಇರುವುದನ್ನು ನೀವು ನೋಡಿರುತ್ತೀರಿ. ಇದರಿಂದ ಸಾಂಬಾರಿಗೆ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ಜೀರಿಗೆಯನ್ನು ಯಂತ್ರಕ್ಕೆ ಹಾಕಿ, ಅದರ ಬಾಲವನ್ನು ಕತ್ತರಿಸಿಯೇ ತರುವುದು ಮಯ್ಯಾಸ್‌ನ ವಿಶೇಷತೆ. ಜೀರಿಗೆಯಲ್ಲಿ ಶೇ.22ರಷ್ಟು ಭಾಗ ಇಂತಹ ಬಾಲ ಇರುತ್ತದೆ. ಬಾಲ ಇರುವ ಜೀರಿಗೆಯನ್ನು ನೀವು ಸಾಂಬಾರಿಗೆ ಬಳಸಿದ್ದೀರಾದರೆ, ಅದರ ಪರಿಮಳ ಕಡಿಮೆ ಇರುತ್ತದೆ. ಸರಿಸುಮಾರು 3 ಲೋಡ್‌ನಷ್ಟು ಜೀರಿಗೆಯನ್ನು ತಂದರೆ, ಅದರಲ್ಲಿ 1 ಲೋಡ್‌ನಷ್ಟು ಈ ಬಾಲವೇ ಇರುತ್ತದೆ. ಈ ಕಸವನ್ನು ತೆಗೆದು, ತರುವುದರಿಂದ ಜೀರಿಗೆಯ ಪ್ರಮಾಣ ಹೆಚ್ಚಿಗೆ ಸಿಗುತ್ತದೆ. ಮಾತ್ರವಲ್ಲ ಕಸವನ್ನು ಹೊತ್ತು ತರುವ ವೃಥಾ ಹೊರೆಯೂ ತಪ್ಪುತ್ತದೆ. ಹಣವೂ ಉಳಿತಾಯ.



ಜೀರಿಗೆಯ ಈ ಬಾಲವನ್ನು ಥರ್ಮಲ್ ಪವರ್ ಪ್ಲಾಂಟ್‌ಗಳಲ್ಲಿ ಬಳಕೆ ಮಾಡುತ್ತಾರೆ. ಇದು ಬ್ರಿಕೆಟ್‌ಗಳನ್ನು ತಯಾರಿಸಲು ಬಳಕೆ ಆಗುತ್ತದೆ.

20-01-2021 Vsv Pg 05